**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಚಳ್ಳಕೆರೆ.**

**ಸಿ.ಸಿ. ನಂ.1788/2024**

ಪ್ರಮಾಣ ವಚನ ಬೋಧಿಸಲಾಯಿತು.

| | | | |
|---|---|---|---|
| ಹೆಸರು | : | ನವೀನ್ | ಸಿ.ಡಬ್ಲ್ಯೂ – 1 |
| ತಂದೆಯ ಹೆಸರು | : | ರವೀಂದ್ರರೆಡ್ಡಿ | ಪಿ.ಡಬ್ಲ್ಯೂ – 1 |
| ವಯಸ್ಸು | : | 28 ವರ್ಷ | |
| ಉದ್ಯೋಗ | : | ವ್ಯಾಪಾರ | |
| ವಾಸಸ್ಥಳ | : | ಭರಮಸಾಗರ | ದಿಃ 13–08–2025. |

**ಮುಖ್ಯ ವಿಚಾರಣೆ: ಮಾನ್ಯ ಎ.ಪಿ.ಪಿ. ರವರಿಂದಃ**

ನಾನು ಭರಮಸಾಗರದಲ್ಲಿ ಅಂಗಡಿ ವ್ಯಾಪಾರ ಮಾಡುತ್ತಿದ್ದೇನೆ. ನನಗೆ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ನಾನು ಕಣ್ಣಾರೆ ಯಾವುದೇ ಘಟನೆಯನ್ನು ನೋಡಿರುವುದಿಲ್ಲ. ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ದೂರು ದಾಖಲಿಸಿರುವುದಿಲ್ಲ. ಪೊಲೀಸರ ಕೋರಿಕೆಯ ಮೇರೆಗೆ ಒಂದು ದಾಖಲೆಗೆ ಸಹಿ ಮಾಡಿರುತ್ತೇನೆ.

ಸಾಕ್ಷಿಗೆ ದೂರನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ದೂರನ್ನು ನಿಪಿಃ1 ಅಂತ, ಸಾಕ್ಷಿಯ ಸಹಿಯನ್ನು ನಿಪಿಃ 1(ಎ) ಅಂತ ಗುರುತಿಸಲಾಯಿತು. ನಿಪಿ.1 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ.

ಸಾಕ್ಷಿಗೆ ಮಹಜರನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಮಹಜರನ್ನು ನಿಪಿಃ2 ಅಂತ, ಸಾಕ್ಷಿಯ ಸಹಿಯನ್ನು ನಿಪಿಃ 2(ಎ) ಅಂತ ಗುರುತಿಸಲಾಯಿತು. ನಿಪಿ.2 ಕ್ಕೆ ಈಗ್ಗೆ ವರ್ಷಗಳ ಹಿಂದೆ ಚಳ್ಳಕೆರ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ನಿಪಿ.2 ಕ್ಕೆ ನನ್ನ ಜೊತೆ ಬೇರೆ ಯಾರು ಸಹಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿಪಿ.2 ಕ್ಕೆ ಸಹಿ ಮಾಡಿದಾಗ ಸಂಜೆ 06–00 ಗಂಟೆ ಆಗಿತ್ತು. ಆ ಸಮಯದಲ್ಲಿ ಯಾವುದೇ ವಸ್ತು ಇರಲಿಲ್ಲ. ಈ ಬಗ್ಗೆ ನಾನು ಪೊಲೀಸರಿಗೆ ಮರು ಹೇಳಿಕೆಯನ್ನು ನೀಡಿರುವುದಿಲ್ಲ. ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನಾನು ಈ ಹಿಂದೆ ನೋಡಿರುವುದಿಲ್ಲ.

ಸಾಕ್ಷಿಯು ನ್ಯಾಯಾಲಯದ ಮುಂದಿರುವ ಬಾವುಟವನ್ನು ನೋಡಿ ಗುರುತಿಸಿರುವುದಿಲ್ಲ.

**( ಈ ಹಂತದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗಾಗಿ ಅನುಮತಿ ಕೋರಿರುತ್ತಾರೆ, ಸಾಕ್ಷಿಯ ಹೇಳಿಕೆ ಹಾಗೂ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)**

**<u>ಪಾಟೀ ಸವಾಲು ಮಾನ್ಯ ಎ.ಪಿ.ಪಿ. ರವರಿಂದಃ</u>**

ದಿನಾಂಕ 10.10.2023 ರಂದು ನಾನು ಮತ್ತು ಚಾಸಾ2 ರವರು ಚಿತ್ರದುರ್ಗಕ್ಕೆ ಹೋಗಿ ಕೋಳಿ ಔಷದಿಯನ್ನು ತೆಗೆದುಕೊಂಡು ಮದ್ಯಾಹ್ನ 12.00 ಗಂಟೆ ಸಮಯದಲ್ಲಿ ಇಮಾಮ್ ಪುರ ಗೇಟಿನಲ್ಲಿ ಬರುತ್ತಿರುವಾಗ ಇಮಾಮ್ ಪುರಬಂಡೆಹಟ್ಟಿ ಎಂಬ ನಾಮಫಲಕಕ್ಕೆ ಕೇಸರಿ ಬಿಳಿ ಹಸರು ಬಣ್ಣದಿಂದ ಕೂಡಿದ ಭಾರತದ ಬಾವುಟಕ್ಕೆ ಹೋಲಿಕೆ ಇರುವ ಬಾವುಟದ ಮೇಲೆ ಮುಸ್ಲಿಮ ಭಾಂದವರ ಪುಣ್ಯಕ್ಷೇತ್ರವಾದ ಮೆಕ್ಕಾ ಮದೀನದ ಚಿತ್ರ ಹಾಗೂ ಧರ್ಮ ಸಂದೇಶಗಳನ್ನು ಮುದ್ರಿಸಿರುವ ಬಾವುಟಗಳನ್ನು ಹಾರಿಸಿರುವುದು ಕಂಡು ಬಂದಿರುತ್ತದೆ ಎಂದರೆ ಸರಿಯಲ್ಲ. ಯಾರೋ ಕಿಡಿಗೇಡಿಗಳು ಕೋಮು ಸೌಹಾರ್ದತೆ ಧಕ್ಕೆ ಯುಂಟು ಮಾಡುವ ಸಲುವಾಗಿ ಸಾರ್ವಜನಿಕ ಸ್ಥಳದಲ್ಲಿ ಆ ರೀತಿಯ ಬಾವುಟ ಹಾರಿಸಿರುತ್ತಾರೆ ಎಂದು ನಿಪಿ.1 ರಿತ್ಯ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

ದಿನಾಂಕ 12.10.2023 ರಂದು ಇಮಾಮ್ ಪುರ ಗೇಟಿನ ಘಟನಾ ಸ್ಥಳ ದಲ್ಲಿ ನಾನು ಸ್ಥಳ ತೋರಿಸಿದ ಮೇರೆಗೆ ಚಾಸಾ–5 ಮತ್ತು 6 ರವರ ಸಮಕ್ಷಮ ಬೆಳಿಗ್ಗೆ 09–00 ರಿಂದ 10–00 ಗಂಟೆ ಸಮಯದಲ್ಲಿ ನಿಪಿ.2 ರಂತೆ ಮಹಜರ್ ಕ್ರಮ ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ. ಮಹಜರ್ ಸಮಯದಲ್ಲಿ ನ್ಯಾಯಾಲಯದ ಮುಂದಿರುವ ಬಾವುಟವನ್ನು ಜಪ್ತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ದಿನಾಂಕಃ 23.10.2023 ರಂದು ಪೊಲೀಸರ ಮುಂದೆ ಈಗ ಓದಿ ಹೇಳಿದಂತೆ ಮರು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಅಲ್ಲಗಳೆದ ಮರು ಹೇಳಿಕೆಯನ್ನು ನಿಪಿ.3 ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಆರೋಪಿತರೇ ಬಾವುಟವನ್ನು ಹಾರಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

**<u>ಪಾಟೀ ಸವಾಲುಃ ಶ್ರೀ ಜೆ.ಡಿ., ಆರೋಪಿ ಪರ ವಕೀಲರಿಂದಃ</u>**

ಆರೋಪಿಯ ಪರ ವಕೀಲರು ಪಾಟೀ ಸವಾಲು ಇರುವುದಿಲ್ಲ ಎಂದು ನುಡಿದ ಕಾರಣ ಸದರಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ